ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಇತ್ತೀಚಿನ ಕನ್ನಡ ಧಾರಾವಾಹಿಗಳಲ್ಲಿ ಹಾವುಗಳು ಮತ್ತು ದೆವ್ವಗಳು ಹೆಚ್ಚಿಗೆ ಕಾಣಿಸಿಕೊಳ್ಳುತ್ತಿರುವುದೇಕೆ?*



2 ಕಾರಣ; ವಿಷಯಭರಿತಕ್ಕಿಂತ ವಿಷಭರಿತ ಕಥೆಗೆ ಟಿಆರ್‌ಪಿ ಹೆಚ್ಚು; ಹಾವು, ದೆವ್ವಕ್ಕೆ ಮೇಕಪ್ ಖರ್ಚು ಕಡಿಮೆ.

ಬೂಕನಕೆರೆ ವಿಜೇಂದ್ರ, ಮೈಸೂರು

*ಜನರಿಗೆ ಕುಡಿಯುವುದು ತಪ್ಪು ಎನ್ನುವ ಡಾಕ್ಟರೊಬ್ಬರು ತಾವೇ ಕುಡಿಯುತ್ತಾರಲ್ಲ...?*

'ದೇಹದ ಮೇಲೆ ಕುಡಿತದ ಪರಿಣಾಮ – ಸ್ವಾನುಭವ' ಎಂಬ ಪುಸ್ತಕ ಬರೆಯುತ್ತಿದ್ದಾರಂತೆ.

ನವಿರವಿ, ಬಾಳೆಹೊನ್ನೂರು

*ಬ್ರಹ್ಮ, ವಿಷ್ಣುವಿಗೆ ನಾಲ್ಕು ಕೈ. ಶಿವನಿಗೆ ಏಕೆ ಎರಡೇ?*

ಪ್ರೊಡಕ್ಷನ್, ಮೇಂಟೆನೆನ್ಸ್ ವಿಭಾಗಗಳಿಗಿಂತ ಡಿಸ್ಪೋಸಲ್ ವಿಭಾಗ ಚಿಕ್ಕದಿರುವುದು ಕೈಗಾರಿಕಾ ನಿಯಮ.

ವೀಣಾ ರವಿ ಪೈ, ಹೊನ್ನಾವರ

*ಮಹಿಳೆಯರ ಕ್ರಿಕೆಟ್‌ನಲ್ಲಿ ಪುರುಷರೇಕೆ ಅಂಪೈರ್?*



ಮಹಿಳೆಯೇ ಅಂಪೈರ್ ಆದರೆ ಓವರ್‌ಗಳ ಮಧ್ಯೆ ಮೇಕಪ್ ಬ್ರೇಕ್ ಬೇಕಾಗಿ ವಿಳಂಬವಾದೀತೆಂದು.

ಬಿ. ಚಂದ್ರೇಗೌಡ, ಬೆಂಗಳೂರು

*ಕೆಟ್ಟು ಪಟ್ಟಣ ಸೇರು ಅಂತಾರಲ್ಲ, ಯಾಕೆ?*

ಪಟ್ಟಣದಲ್ಲಿ ಸರಿಯಾಗಿ ಬೆಂಡೆತ್ತಿ ರಿಪೇರಿ ಮಾಡುತ್ತಾರೆಂಬ ವಿಶ್ವಾಸ.

ವೈ.ಎನ್. ಸುಂದರೇಶನ್, ಮೈಸೂರು

*ಅಪರಕರ್ಮಗಳಲ್ಲಿ ಮಾಡುವ ಪಿಂಡಪ್ರದಾನ, ತರ್ಪಣ, ಭೋಜನಗಳು ನಿಜಕ್ಕೂ ಮೃತರ ಆತ್ಮವನ್ನು ತಲುಪುವುದೆ?*

ಆಕಾರವಿಲ್ಲದ ಆತ್ಮಕ್ಕೆ ಹಲ್ಲು, ಗಂಟಲು ಇದ್ದೀತೇ! ಶ್ರಾದ್ಧವೊಂದು ಭೀತಿ ಕಳೆದುಕೊಳ್ಳುವ ರೀತಿ.

ರತ್ನಜ, ಮೈಸೂರು

*ಶ್ರೀಮಂತಿಕೆ ಹೆಚ್ಚಾದಷ್ಟೂ ಹೆಣ್ಣುಮಕ್ಕಳ ಮೈಮೇಲಿನ ಬಟ್ಟೆ ಕಡಿಮೆಯಾಗಲು ಕಾರಣ ಏನು?*

ನಮ್ಮದೇನಿದ್ದರೂ ಪ್ರಾಮಾಣಿಕ ಗಳಿಕೆ; ಎಲ್ಲವೂ ಮುಕ್ತ, ಪಾರದರ್ಶಕ ಎಂದು ಸೂಚಿಸುವ ಪರಿಯಂತೆ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಬೇಕೆನಿಸಿದಾಗ ಮಳೆ ಬರುವಂತಿದ್ದಿದ್ದರೆ...?*

ಅಂತಹ ದೃಶ್ಯಗಳ ಶೂಟಿಂಗಿನ ಖರ್ಚು ಕಡಿಮೆಯಾಗುತ್ತಿತ್ತು.

ಶಿವಮೊಗ್ಗ ರಮೇಶ್, ಮೈಸೂರು

*ಭಕ್ತನಿಗೂ, ದೇವರಿಗೂ ಮಧ್ಯೆ ಪೂಜಾರಿ ಏಕೆ ಬೇಕು?*

ಭಕ್ತನ ಕೇಸನ್ನು ವಿಶ್ವದ ಜಡ್ಜಿನ ಮುಂದೆ ತರಬೇಕಲ್ಲ! ಆ ಕೇಸು ಕೂಗುವ ಅಮೀನನೇ ಪೂಜಾರಿ!

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

*ಶ್ರೀರಾಮಚಂದ್ರ ಸಂಸಾರಿ. ಆದರೆ ಆತನ ಭಕ್ತ ಬ್ರಹ್ಮಚಾರಿ. ಏಕೆ?*

ಹೆಂಡತಿ ಇಲ್ಲದೆಯೂ ನೆಮ್ಮದಿಯಿಂದಿರಬಹುದು ಎಂದು ಲಕ್ಷ್ಮಣನನ್ನು ಗಮನಿಸಿ ತಿಳಿದುದರಿಂದ.

ಕುಮಾರ ಚಲವಾದಿ, ಹಾಸನ

*ಧಾರ್ಮಿಕ ನಂಬಿಕೆ ಮತ್ತು ವೈಜ್ಞಾನಿಕ ನಂಬಿಕೆಗಳಲ್ಲಿ ಯಾವುದನ್ನು ಅನುಸರಿಸಿದರೆ ಶ್ರೇಯಸ್ಕರ?*

ಜ್ಞಾನ ತಪ್ಪಿಸದ ಧರ್ಮ, ಜ್ಞಾನ ಹೆಚ್ಚಿಸುವ ವಿಜ್ಞಾನಗಳ ಮಿಶ್ರಣ.

ವಂದನಾ, ಮೈಸೂರು

*ಗಾಂಧಿತಾತ ಎಲ್ಲ ನೋಟುಗಳಲ್ಲಿಯೂ ಸದಾ ನಗುತ್ತಿರುತ್ತಾರಲ್ಲಾ, ಏಕೆ?*

ಬ್ರಿಟಿಷರ ಗುಲಾಮಗಿರಿಯಿಂದ ತಪ್ಪಿಸಿದರೆ ಹಣಕ್ಕೆ ಗುಲಾಮರಾದರಲ್ಲ ಎಂದು ನಗುತ್ತಿರುವರಂತೆ.

## ಬಹುಮಾನಿತ ಪ್ರಶ್ನೆ

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ

*ಕುಡಿದ ಅಮಲಿನಲ್ಲಿ ನಡೆಯುವ ಪ್ರಮಾದಗಳಿಗೆ ಅಬಕಾರಿ ಸಚಿವರನ್ನೇಕೆ ಹೊಣೆ ಮಾಡಬಾರದು?*

ಭೇಷ್! ಯಾರೋ ತಪ್ಪುತಪ್ಪಾಗಿ ಇಂಗ್ಲಿಷ್ ಮಾತಾಡಿದರೆ ಬ್ರಿಟಿಷ್ ರಾಣಿಗೆ ಶಿಕ್ಷೆ ನೀಡಿ ಎಂದಂತಾಯಿತು.

ಶಿವಾನಂದ ಹಿಪ್ಪರಗಿ, ವಿಜಯಪುರ

*ಆತ್ಮಗಳ ಸಂಖ್ಯೆ ಹೆಚ್ಚಾಗಲ್ಲ ಅಂತಾರೆ. ಆದರೆ ಜನಸಂಖ್ಯೆ ಹೆಚ್ಚಾಗ್ತಾನೇ ಇದೆ. ಇದು ಹೇಗೆ ರಾಮ್?*

ಆತ್ಮಗೌರವ, ಆತ್ಮಾಭಿಮಾನ, ಒಟ್ಟಿನಲ್ಲಿ ಆತ್ಮವೇ ಇಲ್ಲದ ದೇಹಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರುವುದರಿಂದ.

ವಿ. ಗೋವಿಂದಾಚಾರಿ, ಮೈಸೂರು

*ಶಾಲೆ, ಕಚೇರಿಗಳಿಗೆ ಭಾನುವಾರ ರಜೆಯಿದ್ದಂತೆ ಮದ್ಯದ ಅಂಗಡಿಗಳಿಗೂ ರಜೆ ನೀಡಿದರೆ?*

ಪ್ರಯೋಜನವಿಲ್ಲ. ವರ್ಕ್ ಫ್ರಂ ಹೋಮ್‌ನಂತೆಯೇ ಡ್ರಿಂಕ್ ಫ್ರಂ ಹೋಂ ರೂಢಿಯಾಗುತ್ತದೆ.

ಆರತಿ ಘಟಿಕಾರ್, ದುಬೈ

*ಪತಿ ಮತ್ತು ಪತ್ನಿಯ ಮೌನದ ನಡುವೆ ಇರುವ ವ್ಯತ್ಯಾಸವೇನು?*



ಅದಕ್ಕೆ ಕಾರಣ ತಿಂದ ಪೆಟ್ಟು; ಇದಕ್ಕೆ ಕಾರಣ ಹಿಡಿದ ಪಟ್ಟು.

ಎಸ್. ಕೃಷ್ಣಮೂರ್ತಿ, ಬೆಂಗಳೂರು

*ಅರವತ್ತರ ಹರೆಯದಲ್ಲೂ ನನಗೆ ಇಂದಿನ ಯುವತಿಯರ ಸೌಂದರ್ಯ ಹುಚ್ಚು ಹಿಡಿಸುತ್ತಿದೆಯಲ್ಲ, ಏನು ಮಾಡಲಿ?*

ಯಾರ್‍ಯಾರಿಂದ, ಯಾವ್ಯಾವತ್ತು, ಏನೇನು ಕಾದಿವೆಯೋ... ಕೂಡಲೆ ಹೆಲ್ತ್ ಇನ್ಶೂರೆನ್ಸ್ ಮಾಡಿಸಿ.

■ ರಾಮ್